# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: | 746 |
| ಸದಸ್ಯರ ಹೆಸರು | :: | ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು |
| ಉತ್ತರಿಸುವ ದಿನಾಂಕ | :: | 21.02.2024 |
| ಉತ್ತರಿಸುವ ಸಚಿವರು | :: | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ಜಿಲ್ಲೆಯ ಔರಾದ (ಬಿ) ತಾಲ್ಲೂಕಿನ ಸಂತಪೂರ ಹೋಬಳಿಯ ಕಂದಗೂಳ ಗ್ರಾಮದಲ್ಲಿ ರೈತರು ಜಮೀನಿಗೆ ಹೋಗುವ ಹಳೆಯ ಸುಮಾರು ಕಾಲುದಾರಿಗಳನ್ನು ಅಕ್ಕ ಪಕ್ಕದ ರೈತರು ಸ್ವಾಧೀನ(ಬಂದ) ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರವು ಪ್ರಸ್ತುತ(ಸ್ವಾಧೀನ/ಬಂದ) ಮಾಡಲಾದ ಹಳೆಯ ಕಾಲುದಾರಿಗಳನ್ನು ತೆರವುಗೊಳಿಸಿದೆ ಪುನಃ ರೈತರಿಗೂ ಮತ್ತು ಅಕ್ಕ ಪಕ್ಕದ ಜಮೀನುದಾರರಿಗೂ ಹಾದು ಹೋಗಲು ಅನುಕೂಲವಾಗುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ಸ್ಪಷ್ಟ ಮಾಹಿತಿ ಒದಗಿಸುವುದು) | ಬೀದರ ಜಿಲ್ಲೆಯ ಔರಾದ ಬಿ ತಾಲ್ಲೂಕಿನ ಸಂತಪೂರ ಹೋಬಳಿಯ ಕಂದಗೂಳ ಗ್ರಾಮದ ರೈತರು ಜಮೀನಿಗೆ ಹೋಗುವ ಹಳೆಯ ಕಾಲುದಾರಿಗಳನ್ನು ಸ್ವಾಧೀನ (ಬಂದ) ಮಾಡಿರುವುದನ್ನು ಸ್ಥಾನಿಕವಾಗಿ ಅಕ್ಕ ಪಕ್ಕದ ರೈತರು ಹಾಗೂ ಗ್ರಾಮದ ಮುಖಂಡರನ್ನು ವಿಚಾರಿಸಲಾಗಿರುತ್ತದೆ. ಕಂದಗೂಳ ಗ್ರಾಮದ ಯಾವುದೇ ಕಾಲುದಾರಿಗಳನ್ನು ಸ್ವಾಧೀನ ಮಾಡಿರುವುದು ಕಂಡುಬರುವುದಿಲ್ಲ. |
| ಆ) | ಈ ಗ್ರಾಮದಲ್ಲಿದ್ದ ವಾಯ್ಯ ವಲ್ಯಾಪೂರ್/ಜಿಂಬಗೆ ಗ್ರಾಮಕ್ಕೆ ಹೋಗುವ ಹಳೆಯ ಸರ್ಕಾರಿ ರಸ್ತೆ ಕಾಮಗಾರಿಯು ಕೆ.ಆರ್.ಐ.ಡಿ.ಎಲ್ ವತಿಯಿಂದ 2 ಕಿಲೋ ಮೀಟರ್‌ವರೆಗೆ ಮಾತ್ರ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಾಹಿತಿ ಒದಗಿಸುವುದು; | 2015-16ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಮೈಕ್ರೋ ಯೋಜನೆಯಡಿ ಕಂದಗೋಳ ಗ್ರಾಮದಿಂದ ವಾಯ್ಯ ವಲ್ಯಾಪೂರ್ ನಾಲಾದವರೆಗೆ (0.00 ಕಿ.ಮೀ ದಿಂದ 1.21 ಕಿ.ಮೀ ವರೆಗೆ) ರೂ. 80.00 ಲಕ್ಷದ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗಿರುತ್ತದೆ.. |
| ಇ) | ಕಂದಗೂಳ ಗ್ರಾಮದಿಂದ ವಲ್ಯಾಪೂರ್/ಜಂಬಗಿ ಉಳಿದ ರಸ್ತೆ ಕಾಮಗಾರಿಯು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು;(ವಿವರ ನೀಡುವುದು) | ಕಂದಗೂಳ ಗ್ರಾಮದಿಂದ ವಲ್ಯಾಪೂರ್/ ಜಂಬಗಿವರೆಗೆ ಉಳಿದ ರಸ್ತೆ 3.31 ಕಿ.ಮೀ. ಪೈಕಿ 0.60 ಕಿ.ಮೀ. ರಸ್ತೆ ಮಾತ್ರ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ 5054 ಮುಖ್ಯಮಂತ್ರಿ ವಿಶೇಷ ಅನುದಾನ ಯೋಜನೆಯಡಿಯಲ್ಲಿ ಮಂಜೂರಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಉಳಿದ 2.71 ಕಿ.ಮೀ ರಸ್ತೆ ನಿರ್ಮಾಣಕ್ಕಾಗಿ ಯಾವುದೇ ಯೋಜನೆ ಅಡಿಯಲ್ಲಿ ಅನುದಾನ ಲಭ್ಯವಿಲ್ಲದ ಪ್ರಯುಕ್ತ ಕಾಮಗಾರಿ ಕೈಗೊಂಡಿರುವುದಿಲ್ಲ.<br><br>ಆರ್ಥಿಕ ಇಲಾಖೆಯು ಒದಗಿಸುವ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿ ಕೈಗೊಳ್ಳಲು ಅಗತ್ಯ ಕ್ರಮ ವಹಿಸಲಾಗುವುದು. |
| ಈ) | ಈ ರಸ್ತೆಯ ಆದೇಶದಿಂದ ಐದುನೂರು ಎಕರೆಗೂ ಮೇಲ್ಪಟ್ಟು ಜಮೀನುಗಳಿಗೂ ಹೋಗಲು ರೈತರಿಗೆ ಬಹಳ ಅನಾನುಕೂಲವಾಗುವುದು ನಿಜವಲ್ಲವೇ; ಈ ರಸ್ತೆಯು ಯಾವ ಇಲಾಖೆಯ ವತಿಯಿಂದ ಕಾಮಗಾರಿಯು ಪ್ರಾರಂಭಿಸಲಾಗುವುದು; ಸಂಪೂರ್ಣ ಮಾಹಿತಿ ಒದಗಿಸುವುದು? | |

ಆರ್‌ಡಿ 7 ಎಲ್‌ಜಿಐ 2024

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು